

## ನಿರ್ದೇಶಕರ ಬಗ್ಗೆ

ಸುಮಿತ್ರಾ ಭಾವೆ ಮತ್ತು ಸುನಿಲ್ ಸುಖ್ತಂಕರ್ ಭಾರತೀಯ ಚಿತ್ರರಂಗವನ್ನು ತಮ್ಮ ಸಂವೇದನಾಶೀಲ ಸಿನಿಮಾಗಳಿಂದ ಶ್ರೀಮಂತಗೊಳಿಸಿದ ಮರಾಠಿ ನಿರ್ದೇಶಕರು. ಸಮಾಜ ವಿಜ್ಞಾನದ ವಿದ್ಯಾರ್ಥಿನಿಯಾದ ಸುಮಿತ್ರಾ – ಮುಂಬಯಿಯ 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್'ನಲ್ಲಿ ತರಬೇತಾದವರು. ಸುನಿಲ್, ಪೂನಾದ 'ಫಿಲ್ಮ್ ಇನ್‌ಸ್ಟಿಟ್ಯೂಟ್'ನಲ್ಲಿ ಕಲಿತವರು. ಇವರಿಬ್ಬರೂ ಸೇರಿ ರೂಪಿಸಿದ ಮರಾಠಿ ಸಿನಿಮಾಗಳು ಭಾಷೆಯ ಚೌಕಟ್ಟು ಮೀರಿ ಚಿತ್ರರಸಿಕರನ್ನು ರಂಜಿಸಿವೆ. ವೈಚಾರಿಕತೆಯಿಂದಲೂ ಭಾವತೀವ್ರತೆಯಿಂದಲೂ ಕಲಾತ್ಮಕ ಆಯಾಮದಿಂದಲೂ ಇವರ ಸಿನಿಮಾಗಳು ಗಮನಸೆಳೆಯುತ್ತವೆ. ಅವರ ಚಿತ್ರಗಳು ವಿಶ್ವದ ವಿವಿಧ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿರುವುದಲ್ಲದೆ – ರಾಷ್ಟ್ರೀಯ, ಅಂತರರಾಷ್ಟ್ರೀಯ ಪುರಸ್ಕಾರಗಳನ್ನು ಪಡೆದಿವೆ. 'ಅಸ್ತು' ಎರಡು ಡಜನ್‌ಗೂ ಹೆಚ್ಚು ಪುರಸ್ಕಾರಗಳಿಗೆ ಪಾತ್ರವಾಗಿರುವ ಸಿನಿಮಾ.

**ನಿರ್ದೇಶಕರಾದ ಸುಮಿತ್ರಾ ಭಾವೆ ಮತ್ತು ಸುನಿಲ್ ಸುಖ್ತಂಕರ್**

**ಚಿತ್ರ:** 'ಅಸ್ತು'.
**ನಿರ್ದೇಶಕರು:** ಸುಮಿತ್ರಾ ಭಾವೆ ಮತ್ತು ಸುನಿಲ್ ಸುಖ್ತಂಕರ್
**ನಿರ್ಮಾಣ:** ಶೀಲಾ ರಾವ್ ಮತ್ತು ಡಾ. ಮೋಹನ್ ಅಗಾಶೆ